ದಿನಾಂಕ 03-09-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1 ರಿಂದ 3 ಮತ್ತು 11, 15 ರವರ ಪರ ವಕೀಲರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 7 ಮತ್ತು 8 ರವರ ಪರ ಶ್ರೀ ಬಿಎಸ್‌ಡಿ ವಕೀಲರಿಂದ.**

ನಾನು ಈ ದಾವೆಯನ್ನು ನನ್ನ ತಂದೆ , ತಂದೆಯ ಸಹೋದರರು , ಅವರ ಮಕ್ಕಳು ಎಲ್ಲಾರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ನಾನು ಈ ದಾವೆಯನ್ನು ಎಷ್ಟು ಜನರ ವಿರುದ್ಧ ಸಲ್ಲಿಸಿರುತ್ತೇನೆ ಎಂದು ಸಂಖ್ಯೆಯನ್ನು ಹೇಳಲು ಬರುವುದಿಲ್ಲ. ನಾನು ಖಾಜಿಸಾಬ , ಹಮೀದ , ಹಬೀಬ , ಬಾವಸಾಬ , ರಿಜ್ವಾನ , ತಸ್ಲೀಮ , ಫರೀಜಾನ , ಹಾಜಿಸಾಬ , ಹುಸೇನಬೀ , ಬೇಗಂ , ಮುನೀರಾ, ಖಾಸಿಂಬೀ ಮತ್ತು ಬೀಬೀ ಇವರುಗಳ ವಿರುದ್ಧ ಭಾಗಕ್ಕಾಗಿ ದಾವೆ ಸಲ್ಲಿಸಿರುತ್ತೇನೆ. ದಾವಾ ಜಮೀನುಗಳ ಸರ್ವೇ ನಂಬರ ಹೇಳಲು ಬರುವುದಿಲ್ಲ. ಸದರಿ ದಾವಾ ಸ್ವತ್ತುಗಳು ಮಸೀಹಾಳ ಗ್ರಾಮದಲ್ಲಿ ಇರುತ್ತವೆ. ದಾವಾ ಜಮೀನುಗಳು ಒಂದು 7 ಎಕರೆ , 2 ಎಕರೆ ಮತ್ತು 6 ಎಕರೆ ಎಂದು ಮೂರು ಜಮೀನುಗಳು ಇರುತ್ತವೆ. ಆರು ಎಕರೆ ಜಮೀನು ನಮ್ಮೆಲ್ಲರ ಹೆಸರಿನಲ್ಲಿ ಇರುತ್ತದೆ. 7 ಎಕರೆ ಜಮೀನು ಹಾಜಿಸಾಬನ ಹೆಸರಿನಲ್ಲಿ ಇರುತ್ತದೆ. 2 ಎಕರೆ ಜಮೀನು ಮಹಿಬೂಬಿ ಇವರ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತುಗಳು ಮೊದಲು ನನ್ನ ತಾತನ ಹೆಸರಿನಲ್ಲಿ ಇದ್ದವು.

ನನ್ನ ತಾತನ ಹೆಸರು ಮೋದಿನಸಾ ಎಂದು ಇರುತ್ತದೆ. ಮುಸ್ಲಿಂ ಜನಾಂಗಕ್ಕೆ ಸೇರಿದವನು ಆಗಿರುತ್ತಾನೆ. ನಾನು ಹುಟ್ಟುವ ಪೂರ್ವದಲ್ಲಿಯೇ ನನ್ನ ತಾತ ಮೋದಿನಸಾ ಮೃತನಾಗಿರುತ್ತಾನೆ. ಸದರಿ ಮೋದಿನಸಾ ಈತನಿಗೆ ಇಬ್ಬರು ಜನ ಹೆಂಡತಿಯರು ಇರುತ್ತಾರೆ. ಸದರಿ ಮೋದಿನಸಾ ಈತನಿಗೆ ಇಮಾಮಬೀ ಮತ್ತು ಮೌಲಾಬೀ ಎಂದು ಇಬ್ಬರು ಹೆಂಡತಿಯರು ಇರುತ್ತಾರೆ. ಮೊದಲನೇ ಹೆಂಡತಿ ಇಮಾಮಬೀ ಆಗಿರುತ್ತಾರೆ. ಸದರಿ ಹಿಮಾಮಬೀ ಮತ್ತು ಮೌಲಾಬೀ ಈಗಾಗಲೇ ಮೃತರಾಗಿರುತ್ತಾರೆ. ಇಮಾಮಬೀ ಮತ್ತು ಮೌಲಾಬೀ ನಾನು ಚಿಕ್ಕವಳಿರುವಾಗಲೇ ತೀರಿಕೊಂಡಿರುತ್ತಾಳೆ , ಆದರೆ ಎಷ್ಟು ವರ್ಷ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಇಮಾಮಬೀ ಇವರಿಗೆ 5 ಜನ ಮಕ್ಕಳಿದ್ದು ಅವುಗಳೆಂದರೆ ಬಾಬುಸಾಬ , ಫಾತೀಮಾ , ಹುಸೇನಬೀ, ಖಾಸಿಂಬೀ ಮತ್ತು ಮಾಲನಬೀ ಎಂದು ಇರುತ್ತಾರೆ. ಸದರಿ ಐದು ಜನ ಮಕ್ಕಳು ದಾವೆಯಲ್ಲಿ ಇಮಾಮಬೇ ಮಕ್ಕಳು ಎಂದು ವಾದ ಪತ್ರದಲ್ಲಿ ಹೇಳಿ ಬರೆಯಿಸಿರುತ್ತೇನೆ. ಬಾಬುಸಾಬ ಅಂದಾಜು 40 ವರ್ಷಗಳ ಹಿಂದೆ ಮೃತರಾಗಿರುತ್ತಾರೆ.

ಸದರಿ ಬಾಬುಸಾಬನ ಹೆಂಡತಿ ಹೆಸರು ಮಹಿಬೂಬಬೀ ಎಂದು ಇರುತ್ತದೆ. ಸದರಿ ಮಹಿಬೂಬಬೀ ಜೀವಿತ ಇರುತ್ತಾಳೆ. ಸದರಿ ಬಾಬುಸಾಬನಿಗೆ 7 ಜನ ಮಕ್ಕಳು ಇರುತ್ತಾರೆ , ಅವರುಗಳೆಂದರೆ ಹಾಜೀಸಾಬ , ಬಾವಸಾಬ , ಹಮೀದ , ಹಬೀಬ , ರಿಜ್ವಾನಾ , ಫರಿಜಾನ ಮತ್ತು

ತಸ್ಲೀಮಾ ಎಂದು ಇರುತ್ತಾರೆ. ಬಾಬುಸಾಬನ ನಾಲ್ಕು ಸಹೋದರಿಯರ ( ಪ್ರತಿವಾದಿ 15 ರಿಂದ 18) ವಿವಾಹ ಆಗಿರುತ್ತದೆ. ಅವರ ಅವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ. ಫಾತೀಮಾ , ಮಾಲನಬೀ , ಹುಸೇನಬೀ ಮೂವ್ವರು ನಾಗಡದಿನ್ನಿ ಗ್ರಾಮದಲ್ಲಿ ವಾಸವಿರುತ್ತಾರೆ. ಖಾಸಿಂಬೀ ರಾಯಕುಂಪಿ ಗ್ರಾಮದಲ್ಲಿ ವಾಸವಿರುತ್ತಾರೆ. ಬಾಬುಸಾಬನ ಗಂಡುಮಕ್ಕಳಾದ ಪ್ರತಿವಾದಿ ನಂ.8,10, 11 ಮತ್ತು 13 ಮಸೀಹಾಳ ಗ್ರಾಮದಲ್ಲಿ ವಾಸವಿರುತ್ತಾರೆ. ಪ್ರತಿವಾದಿ ನಂ.9 ರಿಜ್ವಾನ ಅರಿಕೆರಾ ಗ್ರಾಮದಲ್ಲಿ ವಾಸವಿರುತ್ತಾಳೆ. ಸದರಿ ರಿಜ್ವಾನ ಇವಳ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

ನಾನು ದುಡಿದು ತಿನ್ನಲು ಪುನಾ ಮತ್ತು ಬೆಂಗಳೂರಿಗೆ ಹೋಗಿದ್ದೆವು. ಈಗ 15 ವರ್ಷಗಳ ಹಿಂದೆ ದುಡಿದು ತಿನ್ನಲು ಪುನಾ ಹಾಗೂ ಬೆಂಗಳೂರಿಗೆ ಹೋಗಿದ್ದೆವು. ನಾನು ಈಗ ಕಳೆದ 10 ವರ್ಷಗಳಿಂದ ಕೊಪ್ಪರ ಗ್ರಾಮದಲ್ಲಿಯೇ ವಾಸವಿರುತ್ತೇನೆ. ನನ್ನ ಗಂಡನಿಗೆ ಸೇರಿದ ಸ್ವತ್ತುಗಳು ಇರುತ್ತವೆ. ತಸ್ಲೀಮಾ ಮತ್ತು ಫರಿಜಾನ ಯಾವ ಗ್ರಾಮದಲ್ಲಿ ವಾಸವಿರುತ್ತಾಳೆ ಮತ್ತು ಎಷ್ಟು ವರ್ಷಗಳ ಹಿಂದೆ ಮದುವೆ ಆಗಿದೆ ಎಂದು ಗೊತ್ತಿಲ್ಲ. ಅಂದಾಜು 10 -15 ವರ್ಷಗಳ ವರೆಗೆ ಪೂನಾದಲ್ಲಿ ದುಡಿದು ತಿನ್ನಲು ಹೋಗಿದ್ದು , ಜಮೀನಿನ ಕೆಲಸವಿದ್ದಾಗ ಗ್ರಾಮಕ್ಕೆ ಬಂದು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ಎರಡು ವರ್ಷ ದುಡಿದು ತಿನ್ನಲು ಹೋಗಿದ್ದೆವು. ಮೊದಲು ಪೂನಾದಲ್ಲಿ ನಂತರ ಬೆಂಗಳೂರಿನಲ್ಲಿ ದುಡಿದು ತಿನ್ನಲು ಹೋಗಿದ್ದೆವು. ಬೆಂಗಳೂರಿನಲ್ಲಿ ಎಷ್ಟು ವರ್ಷಗಳ ಹಿಂದೆ ದುಡಿದು ತಿನ್ನಲು ಹೋಗಿದ್ದೆ ಎಂದು ನನಗೆ ಈಗ ಹೇಳಲು ನೆನಪಿಲ್ಲ.

ಮೌಲಾಬೀಗೆ ಮಹ್ಮದಸಾಬ ಮತ್ತು ಖಾಸಿಂಸಾಬ ಎಂದು ಇಬ್ಬರು ಗಂಡು ಮಕ್ಕಳು ಇರುತ್ತಾರೆ , ಹೆಣ್ಣು ಮಕ್ಕಳಿರುವುದಿಲ್ಲ. ಮಹ್ಮದಸಾಬ ತೀರಿಕೊಂಡಿರುತ್ತಾರೆ. ಸದರಿ ಮಹ್ಮದ ಸಾಬ ಅಂದಾಜು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ಮಹ್ಮದಸಾಬನ ಹೆಂಡತಿ ಅಲ್ಲಮ್ಮ ಈಗಾಗಲೇ ತೀರಿಕೊಂಡು 15 ವರ್ಷ ಆಗಿರುತ್ತದೆ. ಸದರಿ ಮಹ್ಮದಸಾಬನಿಗೆ ಬೀಬೀ ಮತ್ತು ಖಾಸಿಂಬೀ ಎಂದು ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮದುವೆಯಾಗಿ ಅಂದಾಜು 30 ವರ್ಷ ಆಗಿರುತ್ತದೆ. ಮದುವೆ ಆದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಿರುತ್ತೇನೆ. ನನ್ನ ಸಹೋದರಿ ಖಾಸಿಂಬೀ ಇವಳು ಅರಕೇರಾ ಗ್ರಾಮದಲ್ಲಿ ಗಂಡನೊಂದಿಗೆ ವಾಸವಿರುತ್ತಾಳೆ. ಖಾಸಿಂಸಾಬ 20 ವರ್ಷಗಳ ಹಿಂದೆ ಮೃತನಾಗಿರುತ್ತಾನೆ. ಸದರಿ ಖಾಸಿಂಸಾಬ ಈತನ ಹೆಂಡತಿ ರಸೂಲಬೀ ಜೀವಿತ ಇರುತ್ತಾಳೆ. ಖಾಸಿಂಸಾಬನಿಗೆ ಪ್ರತಿವಾದಿ ನಂ.2 ರಿಂದ 6 ರವರು ಮಕ್ಕಳಾಗಿರುತ್ತಾರೆ. ಪ್ರತಿವಾದಿ 4 ಬೇಗಂ ಇವರನ್ನು ಯಾವ ಗ್ರಾಮಕ್ಕೆ ಮದುವೆ ಮಾಡಿ ಕೊಡಲಾಗಿದೆ ನನಗೆ ಗೊತ್ತಿಲ್ಲ. ಹುಸೇನಬೀ ಇವಳನ್ನು ಸಿರವಾರ ಗ್ರಾಮಕ್ಕೆ ಮದುವೆ ಮಾಡಿ ಕೊಡಲಾಗಿದೆ. ಮುನಿರಾ ಮಸಿಹಾಳ ಗ್ರಾಮದಲ್ಲಿ ವಾಸವಾಗಿರುತ್ತಾಳೆ. ಸದರಿ ಮುನಿರಾ ಮಸಿಹಾಳ ಗ್ರಾಮದಲ್ಲಿ ವಾಸವಿರುತ್ತಾಳೆ ಎಂದು ದಾವೆಯಲ್ಲಿ ಬರೆಯಿಸಿರುತ್ತೇನೆ.

ದಾವಾ ಜಮೀನುಗಳ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾವ ಭಾಷೆಯಲ್ಲಿ ಬರೆಯಲಾಗಿದೆ ನನಗೆ ಗೊತ್ತಿಲ್ಲ. ನಾನು ಹೆಬ್ಬೆರಳಿನ ಗುರುತನ್ನು ಹಾಕುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಮಹ್ಮದಸಾಬ ಮತ್ತು ಖಾಸಿಂಸಾಬ ಜೀವಿತ ಇರುವವರಗೆ ಮತ್ತು ಮರಣ ನಂತರ ಅವರ ವಾರಸುದಾರರು ಈಗಲೂ ಒಟ್ಟು ಕುಟುಂಬದಲ್ಲಿಯೇ ವಾಸವಿರುತ್ತಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು , ಕಾಲವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.